ಅ) ಒಬ್ಬ ನಿರ್ದೇಶಕರಿಂದ ಕಂಪನಿಯು ಲೆಕ್ಕ ಪತ್ರದಲ್ಲಿ ಉಂಟಾದ ಮೋಸದ ಬಗ್ಗೆ ಸರ್ಕಾರಕ್ಕೆ ದೂರು ಕೊಟ್ಟಿದ್ದಾರೆಯೇ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

ಇ) ವ್ಯವಸ್ಥಾಪಕ ನಿರ್ದೇಶಕರ ಮೇಲೆ ಕ್ರಿಮಿನಲ್ ಕ್ರಮ ಜರುಗಿಸಲು ಅಧಿಕಾರಿಗಳು ಮುಚ್ಚಲು ಪ್ರಯತ್ನಿಸುತ್ತಿರುವುದು ನಿಜವೆ ?

ಈ) ಈ ಸಂಸ್ಥೆಯ ನಷ್ಟಕ್ಕೆ ಸರ್ಕಾರದ ನಿರ್ದೇಶಕರನ್ನು ಜವಾಬ್ದಾರರನ್ನಾಗಿ ಮಾಡಲಾಗಿದೆಯೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಸಚಿವರು).—

ಅ) ಸರ್ಕಾರವು ದಿ. ೯-೧೨-೧೯೮೫ರ ಸಂಖ್ಯೆ ಸಿಐ ೮೦ ಪಿಯುಎಂ ೮೫ರ ಅಧಿಸೂಚನೆಯಲ್ಲಿ ಮೂವರು ಸರ್ಕಾರದ ಪ್ರತಿನಿಧಿಗಳನ್ನು ನಂದಿ ಹಿಲ್ಸ್‌ನ ಆಡಳಿತ ಮಂಡಳಿಯಲ್ಲಿ ನೇಮಿಸುವ ಅಧಿಕಾರ ಹೊಂದಿದೆ.

ಆ) ಹೌದು. ಈ ಬಗ್ಗೆ ಸಿಬಿಐ ನಲ್ಲಿ ತನಿಖೆ ನಡೆಯುತ್ತಿದೆ.

ಇ) ಇಲ್ಲ.

ಈ) ಇಲ್ಲ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ನಾಗರೀಕ ಆಹಾರ ಸರಬರಾಜು ಮಂತ್ರಿಗಳು) —ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿ)ಗಳ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

ಭಾರತ ಸಂವಿಧಾನದ ೩೭೩ (೨)ನೇ ಅನುಚ್ಛೇದದ ಮೇರೆಗೆ:—

(ಅ) ೧೯೮೨-೮೩ನೇ ಇಸವಿಯ ಕರ್ನಾಟಕ ಲೋಕಸೇವಾ ಆಯೋಗದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

(ಆ) ೧೯೫೫ನೇ ಇಸವಿಯ ಕೇಂದ್ರ ಮಾರಾಟಗಳ ತೆರಿಗೆ ಶಾಸನದ ೮ನೇ ಕಲಮಿನ ಮೇರೆಗೆ:—

(೧) ದಿನಾಂಕ ೨೮ನೇ ಫೆಬ್ರವರಿ ೧೯೮೭ ರಂದು ಎಫ್‌ಡಿ ೧೪ ಸಿಎಸ್‌ಎಲ್ ೮೭ನೇ ಸಂಖ್ಯೆಯಲ್ಲಿ ಹೊರಡಿಸಲಾದ ಸಿಮೆಂಟ್ ಮಾರಾಟದ ಮೇಲಿನ ತೆರಿಗೆಯ ಅಧಿಸೂಚನೆಯನ್ನು ಸಭೆಯ ಮುಂದಿಡುವುದು.

ಹಾಗೆಯೇ

ಶ್ರೀ ಬಸವಣಪ್ಪ (ಸಮಾಜ ಕಲ್ಯಾಣ ಮಂತ್ರಿ).—ಅವರ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೧೯೫೫ನೇ ಇಸವಿಯ ಕಂಪನಿಗಳ ಶಾಸನದ ೬೧(ಎ) (೨) ಕಲಮಿನ ಮೇರೆಗೆ:—

(ಅ) ೧೯೮೫-೮೬ನೇ ಇಸವಿಯ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ೪ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

(ಆ) ೧೯೮೫-೮೬ನೇ ಇಸವಿಯ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು,

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಗಿದೆ.